**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕಾವೇರಿ ಭವನದ ಎದುರು, ಕೆ.ಜಿ.ರಸ್ತೆ, ಬೆಂಗಳೂರು-560 009**

ಸಂಖ್ಯೆ: CAC/03/ GPTR-2022/ಮೌಲ್ಯಮಾಪನ/2022-23 ದಿನಾಂಕ:30-09-2022

## ಜ್ಞಾಪನ

ವಿಷಯ: ಪದವೀಧರ ಪ್ರಾಥಮಿಕ ಶಿಕ್ಷಕರ(6 ರಿಂದ 8) ನೇಮಕಾತಿ-2022ರ 1:2 ಅನುಪಾತದ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಿದ್ದು, ಅಭ್ಯರ್ಥಿಗಳ ಮೂಲದಾಖಲೆಗಳ ಪರಿಶೀಲಿಸುವ ಕುರಿತು.

ಉಲ್ಲೇಖ:1.ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 89 ಪಿಬಿಎಸ್ 2021(ಭಾಗ)ದಿ:22-02-2022.
2.ಜಿಲ್ಲಾ ಉಪನಿರ್ದೇಶಕರು(ಆಡಳಿತ) ಮತ್ತು ನೇಮಕಾತಿ ಪ್ರಾಧಿಕಾರ ರವರಿಂದ ಕರ್ನಾಟಕ ರಾಜ್ಯಪತ್ರದಲ್ಲಿ ಹೊರಡಿಸಿದ ನೇಮಕಾತಿ ಅಧಿಸೂಚನೆ ದಿ:21-03-2022.

&&&&&

ವಿಷಯ ಹಾಗೂ ಉಲೇಖಗಳನ್ವಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಪದವೀಧರ ಪ್ರಾಥಮಿಕ ಶಿಕ್ಷಕ (6 ರಿಂದ 8ನೇ ತರಗತಿ) ವೃಂದದ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಅಂದರೆ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು [ಸಾರ್ವಜನಿಕ ಶಿಕ್ಷಣ ಇಲಾಖೆ] [ನೇಮಕಾತಿ] [ವಿಶೇಷ] ನಿಯಮಗಳು-2022 ಸಂ: ಇಪಿ 89 ಪಿಬಿಎಸ್ 2021(ಭಾಗ-1) ದಿ:22-02-2022ರ ನಿಯಮಗಳನ್ವಯ ಆಯ್ಕೆ ಮಾಡಲು ದಿನಾಂಕ:21-03-2022ರಂದು ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಈ ಸಂಬಂಧ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ, ಅಭ್ಯರ್ಥಿಗಳು ವೈಯಕ್ತಿಕ ಅಂಕಗಳು ಮತ್ತು ಮೆರಿಟ್‌ನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ಅದರಂತೆ ಇಲಾಖಾ ವೆಬ್‌ಸೈಟ್ https://schooleducation.kar.nic.in ನಲ್ಲಿ 1:2 ಅನುಪಾತದ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ತಮ್ಮ ಜಿಲ್ಲೆಗೆ ಸಂಬಂಧಿಸಿದ ಪಟ್ಟಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಪಟ್ಟಿಯಲ್ಲಿನ ವಿವರಗಳನ್ನು ತಮ್ಮ ಜಿಲ್ಲೆಯ ಅಧಿಸೂಚಿತ ಹುದ್ದೆಗಳಿಗನುಗುಣವಾಗಿ (Seat Matrix) ಕೂಲಂಕಷವಾಗಿ ಅಧಿಕಾರಿಗಳ ತಂಡದಲ್ಲಿ ಪರಿಶೀಲಿಸಿ, ಅರ್ಥೈಸಿಕೊಂಡು ಏನಾದರೂ ವ್ಯತ್ಯಾಸಗಳಿದ್ದಲ್ಲಿ ಕೇಂದ್ರೀಕೃತ ದಾಖಲಾತಿ ಘಟಕದ ಗಮನಕ್ಕೆ ತರುವುದು.

**ಪದವೀಧರ ಪ್ರಾಥಮಿಕ ಶಿಕ್ಷಕರ (6 ರಿಂದ 8ನೇ ತರಗತಿ) ನೇಮಕಾತಿ-2022ರ 1:2 ಅನುಪಾತದ ಪರಿಶೀಲನಾ ಪಟ್ಟಿಯನ್ನು ಮೂಲದಾಖಲೆಗಳ ಪರಿಶೀಲನೆಗಾಗಿ ದಿನಾಂಕ:30-09-2022 ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಕಡತಗೊಳಿಸಿದೆ ಎಂದು ಉಪನಿರ್ದೇಶಕರು (ಆಡಳಿತ) ಮತ್ತು ನೇಮಕಾತಿ ಪ್ರಾಧಿಕಾರ ರವರು ಹಾಗೂ ನೋಡಲ್ ಅಧಿಕಾರಿಗಳು ತಪ್ಪದೇ ದೃಢೀಕರಿಸುವುದು.**

GPTR-2022ರ ಸಂಬಂಧ ಪ್ರಕಟಿತ 1:2 ಪರಿಶೀಲನಾ ಪಟ್ಟಿಯಲ್ಲಿ ಪರಿಗಣಿಸಲ್ಪಟ್ಟಿರುವ ಅಭ್ಯರ್ಥಿಗಳ ಮೂಲದಾಖಲೆಗಳನ್ನು ಅತ್ಯಂತ ಎಚ್ಚರಿಕೆಯಿಂದ, ಯಾವುದೇ ಲೋಪಗಳಿಲ್ಲದಂತೆ ಪರಿಶೀಲಿಸಿ, ಕಾಲಮಿತಿಯಲ್ಲಿ (ವೇಳಾಪಟ್ಟಿಯಂತೆ) ಪೂರ್ಣಗೊಳಿಸುವುದು ಆಯಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಹಾಗೂ ನೇಮಕಾತಿ ಪ್ರಾಧಿಕಾರ ರವರ ಜವಾಬ್ದಾರಿಯಾಗಿರುತ್ತದೆ. ಮೂಲದಾಖಲೆಗಳ

ಪರಿಶೀಲನಾ ಕಾರ್ಯದವು ದಿನಾಂಕ:06-10-2022 ರಿಂದ ಪ್ರಾರಂಭಿಸಬೇಕಿದ್ದು, ಈ ಸಂಬಂಧ ಎಲ್ಲಾ ಅಗತ್ಯ ಸಿದ್ದತೆಗಳನ್ನು ಕೈಗೊಳ್ಳುವುದು.

**ವೇಳಾಪಟ್ಟಿ**

| ಕ್ರ.ಸ | ವಿಭಾಗ | ಜಿಲ್ಲಾ ಹಂತದಲ್ಲಿ ಮೂಲದಾಖಲೆಗಳ ಪರಿಶೀಲನಾ ದಿನಾಂಕ | | ಸಿ.ಎ.ಸಿ ಯಲ್ಲಿ ಸಂಕ್ಷಿಪ್ತ ಪರಿಶೀಲನೆ ಮತ್ತು ದತ್ತಾಂಶದಲ್ಲಿ ಇಂದೀಕರಣ | |
|---|---|---|---|---|---|
| | | ದಿನಾಂಕದಿಂದ | ರವರೆಗೆ | ದಿನಾಂಕದಿಂದ | ರವರೆಗೆ |
| 01 | ಬೆಂಗಳೂರು | 06-10-2022 | 14-10-2022 | 15-10-2022 | 16-10-2022 |
| 02 | ಮೈಸೂರು | 06-10-2022 | 15-10-2022 | 17-10-2022 | 18-10-2022 |
| 03 | ಬೆಳಗಾವಿ | 06-10-2022 | 15-10-2022 | 19-10-2022 | 20-10-2022 |
| 04 | ಕಲ್ಬುರ್ಗಿ | 06-10-2022 | 19-10-2022 | 21-10-2022 | 22-10-2022 |

**ಉಪನಿರ್ದೇಶಕರು (ಆಡಳಿತ) ಹಾಗೂ ನೇಮಕಾತಿ ಪ್ರಾಧಿಕಾರ ಮತ್ತು ನೋಡಲ್ ಅಧಿಕಾರಿಯವರು ಈ ಕೆಳಕಂಡ ಕ್ರಮಗಳನ್ನು ಅನುಸರಿಸುವುದು.**

1. ಇಲಾಖಾ ವೆಬ್‌ಸೈಟ್ https://schooleducation.kar.nic.in ನಲ್ಲಿ ಪ್ರಕಟಿಸಲಾದ ತಮ್ಮ ಜಿಲ್ಲೆಗೆ ಸಂಬಂಧಿಸಿದ 1:2 ಅನುಪಾತದ ತಾತ್ಕಾಲಿಕ ಪರಿಶೀಲನಾ ಪಟ್ಟಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು.
2. ಪರಿಶೀಲನಾ ಪಟ್ಟಿಯನ್ನು ಪ್ರಿಂಟ್ ಪಡೆದು ಉಪನಿರ್ದೇಶಕರ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು.
3. ಅಭ್ಯರ್ಥಿಗಳಿಗೆ ನೀಡಬೇಕಿರುವ ಅಗತ್ಯ ಸೂಚನೆಗಳನ್ನು ಸಿದ್ಧಪಡಿಸಿ, ಸೂಚನಾ ಫಲಕದಲ್ಲಿ ಪ್ರಕಟಿಸುವುದು.
4. ತಮ್ಮ ಜಿಲ್ಲೆಗೆ ಸಂಬಂಧಿಸಿದಂತೆ 1:2 ಪರಿಶೀಲನಾ ಪಟ್ಟಿಯಲ್ಲಿ ಪರಿಗಣಿಸಲ್ಪಟ್ಟಿರುವ ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಜಿಲ್ಲಾ ಉಪನಿರ್ದೇಶಕರ ಕಛೇರಿಯ ಶಿಕ್ಷಣಾಧಿಕಾರಿಗಳು, ಡಯೆಟ್‌ನ ಹಿರಿಯ ಉಪನ್ಯಾಸಕರು, ವಿಷಯ ಪರಿವೀಕ್ಷಕರು ಮತ್ತು ಇತರ ಅಧಿಕಾರಿಗಳ ನೇತೃತ್ವದಲ್ಲಿ ಉತ್ತಮ, ಕ್ರಿಯಾಶೀಲ ಅಧಿಕಾರಿ/ಸಿಬ್ಬಂದಿಗಳನ್ನೊಳಗೊಂಡಂತೆ ವಿವಿಧ ತಂಡಗಳನ್ನು ರಚಿಸುವುದು. (ಅನುಬಂಧ-4)
5. ಸಿ.ಎ.ಸಿ ಆನ್‌ಲೈನ್ ನಮೂನೆಯಲ್ಲಿ ಮೂಲದಾಖಲೆಗಳನ್ನು ಮತ್ತು ಪರಿಶೀಲನಾ ಮಾಹಿತಿಯನ್ನು Upload ಮಾಡಿ Submit ಮಾಡುವ ಸಂಬಂಧ ಪ್ರತಿ ತಂಡದ ಪರಿಶೀಲನಾಧಿಕಾರಿಗೆ Login ID ಮತ್ತು Pasword ಅನ್ನು ನೀಡಲಾಗುವುದು. ಈ ಹಿನ್ನೆಲೆಯಲ್ಲಿ ತಂಡಗಳ ಸಂಖ್ಯೆಯನ್ನು ನೀಡಿದಲ್ಲಿ ಸದರಿ ಸಂಖ್ಯೆಗನುಗುಣವಾಗಿ Login ID ಮತ್ತು Pasword ಅನ್ನು ಉಪನಿರ್ದೇಶಕರ ಮೂಲಕ ನೀಡಲಾಗುವುದು.
6. ಮೂಲದಾಖಲೆಗಳ ಪರಿಶೀಲನೆಗಾಗಿ ಅಗತ್ಯ ಗಣಕಯಂತ್ರಗಳು ಮತ್ತು ಇಂಟರ್‌ನೆಟ್ ಸೌಲಭ್ಯವನ್ನು ಸಿದ್ಧಪಡಿಸಿಕೊಳ್ಳುವುದು. ಗಣಕೀಕೃತ ಮೌಲ್ಯಮಾಪನ ಕೇಂದ್ರಗಳಿರುವ ಜಿಲ್ಲೆಗಳಲ್ಲಿ ಅಗತ್ಯವಿದ್ದಲ್ಲಿ ಸದರಿ ಕೇಂದ್ರಗಳನ್ನು ಬಳಸಿಕೊಳ್ಳುವುದು.

7. ನೀಡಲಾದ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುವಂತೆ ಮೂಲದಾಖಲೆಗಳ ಪರಿಶೀಲನೆಗೆ ಹಾಜರಾಗಬೇಕಾದ ಅಭ್ಯರ್ಥಿಗಳ ಪಟ್ಟಿ (ಅರ್ಜಿ ಸಂಖ್ಯೆಗಳನ್ನು ಮಾತ್ರ ನಮೂದಿಸಿ) ದಿನಾಂಕವಾರು ಹಂಚಿಕೆ ಮಾಡುವುದು ಹಾಗೂ ಸದರಿ ಪಟ್ಟಿಯನ್ನು ಕೇಂದ್ರೀಕೃತ ದಾಖಲಾತಿ ಘಟಕಕ್ಕೆ ದಿನಾಂಕ:01-10-2022 ರ ಬೆಳಗ್ಗೆ 11.30ರ ಒಳಗಾಗಿ ಹಾರ್ಡ್ ಮತ್ತು ಸಾಫ್ಟ್ ಪ್ರತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧ ಇ-ಮೇಲ್ ಮಾಡುವುದು. (ಅನುಬಂಧ-2ರ ನಮೂನೆಯಲ್ಲಿ)

8. ಮೂಲದಾಖಲೆಗಳ ಪರಿಶೀಲನೆಗೆ ಹಾಜರಾಗುವ ಬಗ್ಗೆ ವೇಳಾಪಟ್ಟಿ, ಸ್ಥಳ, ಸಮಯ, ಅಭ್ಯರ್ಥಿಗಳಿಗೆ ಪ್ರಮುಖವಾದ ಸೂಚನೆಗಳು ಇತ್ಯಾದಿಗಳ ಕುರಿತು ಸ್ಥಳೀಯ ಮಾಧ್ಯಮಗಳಲ್ಲಿ ಪ್ರಕಟಿಸುವುದು. ಈ ಬಗ್ಗೆ ಪ್ರತಿದಿನ ಸ್ಥಳೀಯ ಪತ್ರಿಕೆ ಹಾಗೂ ಮಾಧ್ಯಮಗಳಲ್ಲಿ ಪ್ರಕಟಿಸುವುದು.

9. ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಲು Helpline ಸ್ಥಾಪಿಸಿ, ದೂರವಾಣಿ ಸಂಖ್ಯೆ ಗಳನ್ನು ಪತ್ರಿಕಾ ಮಾಧ್ಯಮದಲ್ಲಿ ಪ್ರಕಟಿಸುವುದು. ನೋಡೆಲ್ ಅಧಿಕಾರಿ/ವಿಷಯ ಪರಿವೀಕ್ಷಕರು /ಪರಿಶೀಲನಾಧಿಕಾರಿಗಳ ಹಾಗೂ ಸಿಬ್ಬಂದಿಗಳ ದೂರವಾಣಿ ಸಂಖ್ಯೆಗಳನ್ನು ಮತ್ತು ನೋಟೀಸ್ ಬೋರ್ಡ್‌ಗೆ ಅಂಟಿಸುವುದು ಮತ್ತು ಸದರಿ ನಂಬರ್‌ಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸಿ.ಎ.ಸಿ ದಿನಾಂಕ:01-10-2022 ರ ಬೆಳಗ್ಗೆ 11.30ರ ಒಳಗಾಗಿ cackarnataka1@gmail.com ಕಳುಹಿಸುವುದು. (ಅನುಬಂಧ-2ರ ನಮೂನೆಯಲ್ಲಿ ಆಂಗ್ಲಭಾಷೆಯಲ್ಲಿ ಭರ್ತಿ ಮಾಡಿ)

10. 1:2 ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳ ಮೂಲದಾಖಲೆಗಳ ಪರಿಶೀಲನಾ ಕಾರ್ಯಕ್ಕಾಗಿ ನಿಯೋಜನೆಗೊಂಡ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ವೃಂದ ಮತ್ತು ನೇಮಕಾತಿ ನಿಯಮಗಳು ಮತ್ತು ನೇಮಕಾತಿ ಅಧಿಸೂಚನೆಯ ನಿಯಮಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡು, ಪ್ರಚಲಿತ ಆಯ್ಕೆ ನಿಯಮಗಳು, ಮೀಸಲಾತಿಗಳಿಗೆ ಸಂಬಂಧಿಸಿದಂತೆ ಇರುವ ಪ್ರಚಲಿತ ನಿಯಮಗಳ ಕುರಿತಾಗಿ ಇರುವ ಆದೇಶಗಳನ್ನು ಸಂಗ್ರಹಿಸಿ, ಅವುಗಳನ್ವಯ ಮೂಲದಾಖಲೆಗಳ ಪರಿಶೀಲನಾಧಿಕಾರಿ ಮತ್ತು ಸಿಬ್ಬಂದಿಗೆ ಅಗತ್ಯ ತರಬೇತಿ, ಮಾರ್ಗದರ್ಶನ ನೀಡುವುದು. ಈ ಬಗ್ಗೆ ನಡಾವಳಿಯನ್ನು ತಯಾರಿಸುವುದು.

11. ಮೂಲದಾಖಲೆಗಳ ಪರಿಶೀಲನಾ ಸಂಬಂಧ ರಚನೆಯಾದ ವಿವಿಧ ತಂಡಗಳ ಪ್ರತಿಯೊಬ್ಬ ಪರಿಶೀಲನಾಧಿಕಾರಿ ಮತ್ತು ಸಿಬ್ಬಂದಿಯು ವೃಂದ ಮತ್ತು ನೇಮಕಾತಿ ನಿಯಮಗಳು, ನೇಮಕಾತಿ ಅಧಿಸೂಚನೆಯಲ್ಲಿನ ನಿಯಮಗಳನ್ನು ಕಡ್ಡಾಯವಾಗಿ ಓದಿ ಅರ್ಥೈಸಿಕೊಳ್ಳಬೇಕು. ಸದರಿ ಪರಿಶೀಲನಾ ಪಟ್ಟಿಯಲ್ಲಿನ ಪ್ರತಿಯೊಬ್ಬ ಅಭ್ಯರ್ಥಿಯ ಜೀವನದ ಪ್ರಶ್ನೆಯಾಗಿರುವುದರಿಂದ ಮೂಲದಾಖಲೆಗಳನ್ನು ಅತ್ಯಂತ ಎಚ್ಚರಿಕೆ ಹಾಗೂ ಜಾಗರೂಕತೆಯಿಂದ ನಿರ್ವಹಿಸಬೇಕಿದೆ ಮತ್ತು ಅದರಂತೆ ಸೂಕ್ತ ದೃಢೀಕರಣದೊಂದಿಗೆ ಕೂಡಲೇ ಸಿ.ಎ.ಸಿ ದತ್ತಾಂಶದಲ್ಲಿ ಸೂಕ್ತ ಷರಾ ಮತ್ತು ದಾಖಲೆಯ Upload ಮಾಡುವುದರೊಂದಿಗೆ ಇಂದೀಕರಿಸುವುದು.

12. ಅಭ್ಯರ್ಥಿಗಳ ಮೂಲದಾಖಲೆಗಳ ಪರಿಶೀಲನೆಗಾಗಿ ಕೇಂದ್ರೀಕೃತ ದಾಖಲಾತಿ ಘಟಕದಿಂದ ನೀಡಲಾಗುವ **ಆನ್‌ಲೈನ್ ನಮೂನೆಯ** ಎಲ್ಲಾ ಅಂಕಣಗಳಲ್ಲಿ ಅಭ್ಯರ್ಥಿಯು ಭರ್ತಿ ಮಾಡಿರುವ

ಮಾಹಿತಿಗೆ ಸಂಬಂಧಪಟ್ಟಂತೆ ಎಲ್ಲಾ ಮೂಲದಾಖಲೆಗಳನ್ನು (ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡಿರುವಂತೆ) ಕಡ್ಡಾಯವಾಗಿ Upload ಮಾಡುವುದು.

13. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿಗಳಂತೆ ಮೂಲದಾಖಲೆಗಳನ್ನು ಪರಿಶೀಲಿಸಿ, ನಮೂದಿಸಿದ ಶೈಕ್ಷಣಿಕ ಅರ್ಹತೆ, ವಿವಿಧ ಮೀಸಲಾತಿಗಳನ್ವಯ ಅಭ್ಯರ್ಥಿಯು ಅರ್ಹರೆ ಅಥವಾ ಇಲ್ಲವೇ ಎಂದು ನಿರ್ಧರಿಸಿ, ದೃಢೀಕರಣದೊಂದಿಗೆ ಸೂಕ್ತ ತಿದ್ದುಪಡಿ ಮಾಡಿ, ಆನ್‌ಲೈನ್ ದತ್ತಾಂಶದಲ್ಲಿ ನಿಗದಿತ ನಮೂನೆಯಲ್ಲಿ ಇಂದೀಕರಿಸುವುದು (Updation).

14. ಕೇಂದ್ರೀಕೃತ ದಾಖಲಾತಿ ಘಟಕದಲ್ಲಿ ದಿನಾಂಕ:18-08-2022 ರಿಂದ 24-08-2022 ರವರೆಗೆ ಅಧಿಸೂಚನೆಯಲ್ಲಿ ತಿದ್ದುಪಡಿಗೆ ಅವಕಾಶವಿಲ್ಲದ ವಿಷಯಗಳ ತಿದ್ದುಪಡಿಗೆ ಸಂಬಂಧಿಸಿದಂತೆ **ಉದಾ:** ಪ್ರಮಾಣ ಪತ್ರ ಸಂಖ್ಯೆ, ಎಸ್.ಎಸ್.ಎಲ್.ಸಿ, ಪಿಯುಸಿ, ಪದವಿ, ಡಿ.ಇಡಿ/ಬಿ.ಇಡಿ ಟಿ.ಇ.ಟಿ/ಸಿ.ಟಿ.ಇ.ಟಿ ಇತ್ಯಾದಿ ಗಳಿಗೆ ದಾಖಲಾತಿ ವರ್ಷ, ಉತ್ತೀರ್ಣವಾದ ವರ್ಷ, ಪ್ರಮಾಣ ಪತ್ರದ ಸಂಖ್ಯೆ, ಅಧ್ಯಯನ ಮಾಡಿದ ಬೋರ್ಡ್, ವಿಶ್ವವಿದ್ಯಾಲಯ ಹೆಸರು ಇತ್ಯಾದಿಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಸಲ್ಲಿಕೆಯಾದ ಮನವಿಗಳನ್ನು ಈ ಕಛೇರಿಯಿಂದ ಜಿಲ್ಲೆಗಳಿಗೆ ಕಳುಹಿಸಲಾಗುತ್ತಿದೆ. (ಜಿಲ್ಲೆಗೆ ಹಂಚಿಕೆಯಾದ ಮನವಿಗಳ ಸಂಖ್ಯೆಯನ್ನು ಅನುಬಂಧ-3) ಸದರಿ ಮನವಿಗಳನ್ನು ಪರಿಶೀಲನಾ ವೇಳೆಯಲ್ಲಿ ಪರಿಶೀಲಿಸಿ, ಸೂಕ್ತವಾದವುಗಳನ್ನು ದೃಢೀಕರಣದೊಂದಿಗೆ ದತ್ತಾಂಶದಲ್ಲಿ ಇಂದೀಕರಿಸುವುದು.

15. ಪರಿಶೀಲನಾ ವೇಳೆಯಲ್ಲಿ ಅಭ್ಯರ್ಥಿಗಳ ಮೂಲದಾಖಲೆಗಳನ್ನು ಪರಿಶೀಲಿಸಿದ ನಂತರ ಹಾಗೂ ನಿಯಮಾನುಸಾರ ತಿದ್ದುಪಡಿಗೆ ಅವಕಾಶವಿರುವ ಅಗತ್ಯ ತಿದ್ದುಪಡಿಗಳ ಇಂದೀಕರಣ ಮಾಡುವ ಮೊದಲು ಸಂಬಂಧಪಟ್ಟ ಪರಿಶೀಲನಾಧಿಕಾರಿ, ನೋಡಲ್ ಅಧಿಕಾರಿ/ಉಪನಿರ್ದೇಶಕರು ಹಾಗೂ ಅಭ್ಯರ್ಥಿಯ ದೃಢೀಕರಣದ ನಂತರ ದತ್ತಾಂಶದಲ್ಲಿ Upload ಮಾಡುವುದು.

16. ಪ್ರತಿ ಅಭ್ಯರ್ಥಿಯ ಮೂಲದಾಖಲೆಗಳ ಪರಿಶೀಲಿಸಿ, Upload ಮಾಡಿ, Submit ಮಾಡುವ ಮೊದಲು ಆನ್‌ಲೈನ್ ಅರ್ಜಿಯಲ್ಲಿರುವಂತೆ ಎಲ್ಲಾ ಮಾಹಿತಿಗಳು ಸರಿಯಾಗಿವೆಯೇ ಖಾತ್ರಿಪಡಿಸಿಕೊಳ್ಳುವುದು. ನಂತರ ಸಿ.ಎ.ಸಿಯ ಆನ್‌ಲೈನ್ ದತ್ತಾಂಶದಲ್ಲಿ Verified Correct ಎಂದು ಕ್ಲಿಕ್ ಮಾಡಿ Submit ಮಾಡುವುದು.

17. ಪ್ರತಿಯೊಬ್ಬ ಅಭ್ಯರ್ಥಿಯ ಮೂಲದಾಖಲೆಗಳನ್ನೊಳಗೊಂಡ ಪ್ರತ್ಯೇಕ ಕಡತ (Drosiyar) ನಿರ್ವಹಣೆ ಮಾಡಿ, ಮೂಲದಾಖಲೆಗಳ ಪರಿಶೀಲನೆ ಮಾಡಿ ಆನ್‌ಲೈನ್ ಅರ್ಜಿಯ ದತ್ತಾಂಶದಲ್ಲಿ ಇಂದೀಕರಿಸಿದ ನಂತರ ಆನ್‌ಲೈನ್ ಪ್ರಿಂಟ್ ಪಡೆದು ದೃಢೀಕರಿಸಿ (ಅಭ್ಯರ್ಥಿಯ ದೃಢೀಕರಣ, ಪರಿಶೀಲನಾಧಿಕಾರಿಯ ದೃಢೀಕರಣ, ನೋಡಲ್ ಅಧಿಕಾರಿಯ ದೃಢೀಕರಣದ) ಕಡತದಲ್ಲಿರಿಸುವುದು.

18. ಪರಿಶೀಲನೆಯ ನಂತರ ಅಪೂರ್ಣ ದಾಖಲೆಗಳು ಅಥವಾ ಅಭ್ಯರ್ಥಿಯು ಅರ್ಜಿಯಲ್ಲಿ ನೀಡಿರುವ ತಪ್ಪು ಮಾಹಿತಿಯಿಂದಾಗಿ ಅಭ್ಯರ್ಥಿಗಳು ಪಟ್ಟಿಯಿಂದ ಹೊರಹೋಗುವ/Reject ಆಗುವ ಅಥವಾ ಮೆರಿಟ್ ಕಡಿಮೆಯಾಗುವ ಅಥವಾ ಮೀಸಲಾತಿಯಲ್ಲಿ ವ್ಯತ್ಯಾಸವಾಗುವ ಸಂಭವವಿದ್ದರೆ ಅಂತಹ ಅಭ್ಯರ್ಥಿಗಳಿಗೆ ಸಕಾರಣದೊಂದಿಗೆ ಸೂಕ್ತ ತಿಳುವಳಿಕೆ ನೀಡುವುದು. ಆದಾಗ್ಯೂ ಮನವಿ ಸಲ್ಲಿಸಿ, ಸಕಾರಣ ಕೋರಿದಲ್ಲಿ ವೃಂದ ಮತ್ತು ನೇಮಕಾತಿ, ಅಧಿಸೂಚನೆಯ ನಿಯಮಗಳನ್ವಯ, ನಿಯಮ ಉಲ್ಲೇಖಿಸಿ ಸೂಕ್ತ ಹಿಂಬರಹ ನೀಡುವುದು.

19. ಮೂಲದಾಖಲೆಗಳ ಪರಿಶೀಲನೆಯ ನಂತರ Reject ಆಗುವ Merit ಕಡಿಮೆಯಾಗಿ ಅಥವಾ ಮೀಸಲಾತಿ ಪ್ರಮಾಣ ಪತ್ರಗಳು ಅಥವಾ ಇನ್ನಿತರ ಸೂಕ್ತ ಪ್ರಮಾಣ ಪತ್ರಗಳನ್ನು ಸಲ್ಲಿಸದ ಅಥವಾ ನಿಗದಿತ ಶೈಕ್ಷಣಿಕ ಅರ್ಹತಾ ಅಂಕಗಳನ್ನು ಗಳಿಸದೇ ಅಥವಾ ಸೂಕ್ತ ವಿಷಯಗಳನ್ನು ಪದವಿಯಲ್ಲಿ ಅಧ್ಯಯನ ಮಾಡದವರು ಅಥವಾ ದಾಖಲೆಗಳ ಪರಿಶೀಲನಾ ವೇಳೆಯಲ್ಲಿ ಅಗತ್ಯ ದಾಖಲೆ ಸಲ್ಲಿಸಿ, ಸಿ.ಎ.ಸಿ ದತ್ತಾಂಶದಲ್ಲಿ ನಮೂದಿಸದೇ ನೇಮಕಾತಿ ಪಟ್ಟಿಯಿಂದ ಹೊರಗುಳಿಯುವ ಅಥವಾ ಪಟ್ಟಿಯ ರ್‍ಯಾಂಕಿಂಗ್ ನಲ್ಲಿ ವ್ಯತ್ಯಾಸವಾಗುವ ಅಭ್ಯರ್ಥಿಗಳು ಮಾನ್ಯ ನ್ಯಾಯಾಲಯ ಮೊರೆ ಹೋಗುವ ಸಾಧ್ಯತೆ ಇರುವುದರಿಂದ ಪರಿಶೀಲನಾ ಕಾರ್ಯವನ್ನು ಅತ್ಯಂತ ಜವಾಬ್ದಾರಿ ಹಾಗೂ ಜಾಗರೂಕತೆಯಿಂದ ನಿಯಮಾನುಸಾರ ನಿರ್ವಹಿಸುವುದು. ಈ ಸಂಬಂಧ ಯಾವುದೇ ವ್ಯತ್ಯಾಸಗಳುಂಟಾದಲ್ಲಿ ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿಯವರು ನೇರ ಹೊರಗಾರರಾಗುತ್ತಾರೆ.

**ಮೂಲದಾಖಲೆಗಳ ಪರಿಶೀಲನಾ ವೇಳೆಯಲ್ಲಿ ಗಮನಿಸಬೇಕಾದ ಅಂಶಗಳು**

| ಕ್ರ.ಸ | ಪರಿಶೀಲನಾ ಅಂಶಗಳು | ಕೈಗೊಳ್ಳಬೇಕಾದ ಕ್ರಮ |
|---|---|---|
| 01 | ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಗ್ರಾಮೀಣ ಎಂದು ನಮೂದಿಸಿದ್ದು, Non-Creamy Layer Certificate ನ್ನು ಹಾಜರುಪಡಿಸದಿದ್ದಲ್ಲಿ, | ಗ್ರಾಮೀಣ ಮೀಸಲಾತಿ ಅಂಕಣದಲ್ಲಿ No ಎಂದು ನಮೂದಿಸುವುದು. |
| 02 | ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ YN (ಯೋಜನಾ ನಿರಾಶ್ರಿತರು) ಎಂದು ನಮೂದಿಸಿ, ಸಕ್ಷಮ ಪ್ರಾಧಿಕಾರದಿಂದ YN Certificate ನ್ನು ಹಾಜರುಪಡಿಸದಿದ್ದಲ್ಲಿ, | YN ಮೀಸಲಾತಿ ಅಂಕಣದಲ್ಲಿ No ಎಂದು ನಮೂದಿಸುವುದು. |
| 03 | ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ತಮ್ಮ ಹೆಸರನ್ನು ನಮೂದಿಸುವಾಗ ಕಾಗುಣಿತ ದೋಷ ಮಾಡಿದ್ದು ಹಾಗೂ ಅವರ ಹುಟ್ಟಿದ ದಿನಾಂಕವನ್ನು ತಪ್ಪಾಗಿ ನಮೂದಿಸಿದ್ದು, ಅವುಗಳನ್ನು ಸರಿಪಡಿಸುವಂತೆ ಎಸ್.ಎಸ್.ಎಲ್.ಸಿ ಅಂಕಪಟ್ಟಿಯೊಂದಿಗೆ ಆಕ್ಷೇಪಣೆ ಸಲ್ಲಿಸಿದಲ್ಲಿ, | ಎಸ್.ಎಸ್.ಎಲ್.ಸಿ ಅಂಕಪಟ್ಟಿ ಅಂಕಪಟ್ಟಿ ಪರಿಶೀಲಿಸಿ, ಅದರಂತೆ ಅಗತ್ಯ ದೃಢೀಕರಣದೊಂದಿಗೆ ದತ್ತಾಂಶದಲ್ಲಿ ಇಂದೀಕರಿಸುವುದು. |
| 04 | ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಬಿ.ಇಡಿ ಅಂಕಗಳನ್ನು ತಪ್ಪಾಗಿ ನಮೂದಿಸಿದ್ದು (ಗರಿಷ್ಠ ಅಂಕಗಳನ್ನು ನಮೂದಿಸುವ ಸ್ಥಾನದಲ್ಲಿ ಪಡೆದ ಅಂಕಗಳು ಹಾಗೂ ಪಡೆದ ಅಂಕಗಳನ್ನು ನಮೂದಿಸುವ ಸ್ಥಾನದಲ್ಲಿ ಗರಿಷ್ಠ ಅಂಕಗಳನ್ನು ನಮೂದಿಸಿರುತ್ತಾರೆ). ಈಗಾಗಲೇ ಇಂತಹ ಅಭ್ಯರ್ಥಿಗಳಿಗೆ ಆನ್‌ಲೈನ್ ಮೂಲಕ 07 ದಿನಗಳ ಸಮಯಾವಕಾಶ ನೀಡಲಾಗಿದ್ದು, ಈ ಅವಧಿಯಲ್ಲಿ ತಿದ್ದುಪಡಿ ಮಾಡದ ಅಭ್ಯರ್ಥಿಗಳು ಬಿ.ಇಡಿ ವಿದ್ಯಾರ್ಹತೆಯ ಅಂಕಪಟ್ಟಿಯೊಂದಿಗೆ ಆಕ್ಷೇಪಣೆ ಸಲ್ಲಿಸಿದಲ್ಲಿ, | ಮೂಲದಾಖಲೆ ಪರಿಶೀಲಿಸಿ, ಅಗತ್ಯ ದೃಢೀಕರಣದೊಂದಿಗೆ ದತ್ತಾಂಶದಲ್ಲಿ ಇಂದೀಕರಿಸುವುದು. |
| 05 | ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಕಲ್ಯಾಣ ಕರ್ನಾಟಕ ಮೀಸಲಾತಿಗಾಗಿ H.K ಎಂದು ನಮೂದಿಸಿ, ಸಕ್ಷಮ ಪ್ರಾಧಿಕಾರದಿಂದ ಪಡೆದ 317ಜೆ ಪ್ರಮಾಣ ಪತ್ರವನ್ನು ಸಲ್ಲಿಸದಿದ್ದಲ್ಲಿ, | H.K ಮೀಸಲಾತಿ ಅಂಕಣದಲ್ಲಿ No ಅಗತ್ಯ ದೃಢೀಕರಣದೊಂದಿಗೆ ದತ್ತಾಂಶದಲ್ಲಿ ಇಂದೀಕರಿಸುವುದು. |
| 06 | ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಕನ್ನಡ ಮಾಧ್ಯಮ | ಕನ್ನಡ ಮಾಧ್ಯಮ ಮೀಸಲಾತಿ |

| | | |
|---|---|---|
| | ಎಂದು ನಮೂದಿಸಿ, 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲು ಸಹಿ ಇರುವ ಪ್ರಮಾಣ ಪತ್ರವನ್ನು ಸಲ್ಲಿಸದಿದ್ದಲ್ಲಿ, | ಅಂಕಣದಲ್ಲಿ No ಅಗತ್ಯ ದೃಢೀಕರಣದೊಂದಿಗೆ ದತ್ತಾಂಶದಲ್ಲಿ ಇಂದೀಕರಿಸುವುದು. |
| 07 | ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಪ್ರಸ್ತುತ ಸರ್ಕಾರಿ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದಾಗಿ ನಮೂದಿಸಿದ್ದು, ಸದರಿ ಹುದ್ದೆಗೆ ಅರ್ಜಿ ಸಲ್ಲಿಸುವ ಸಂಬಂಧ ನೇಮಕಾತಿ ಪ್ರಾಧಿಕಾರದಿಂದ ಪಡೆದ ನಿರಪೇಕ್ಷಣಾ ಪತ್ರವನ್ನು ಸಲ್ಲಿಸದಿದ್ದಲ್ಲಿ, | ನಿಗದಿತ ಅಂಕಣದಲ್ಲಿ No ಅಗತ್ಯ ದೃಢೀಕರಣದೊಂದಿಗೆ ದತ್ತಾಂಶದಲ್ಲಿ ಇಂದೀಕರಿಸುವುದು. |
| 08 | ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಅಂಕಗಳನ್ನು ನಮೂದಿಸುವಾಗ ವ್ಯತ್ಯಾಸ ಮಾಡಿದ್ದಲ್ಲಿ, ತಿದ್ದುಪಡಿಗಾಗಿ ಅವಶ್ಯ ಅಂಕಪಟ್ಟಿಗಳೊಂದಿಗೆ ಆಕ್ಷೇಪಣೆ ಸಲ್ಲಿಸಿದಲ್ಲಿ, | ಸಂಬಂಧಪಟ್ಟ ಅಂಕಪಟ್ಟಿಗಳನ್ನು ಪರಿಶೀಲಿಸಿ, ಅಗತ್ಯ ದೃಢೀಕರಣದೊಂದಿಗೆ ದತ್ತಾಂಶದಲ್ಲಿ ಇಂದೀಕರಿಸುವುದು. |
| 09 | ಓ.ಬಿ.ಸಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು CTET ಯಲ್ಲಿ ಶೇ.55 ಕ್ಕಿಂತ ಹೆಚ್ಚು ಅಂಕ ಮತ್ತು ಶೇ.60ಕ್ಕಿಂತ ಕಡಿಮೆ ಶೇಕಡವಾರು ಅಂಕಗಳೊಂದಿಗೆ ಅರ್ಹತೆಯನ್ನು ಪಡೆದಿರುವ ಪ್ರಮಾಣ ಪತ್ರವನ್ನು ಸಲ್ಲಿಸಿದಲ್ಲಿ | 2ಎ/2ಬಿ/3ಎ/3ಬಿ ಮತ್ತು ಸಾಮಾನ್ಯ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು CTET ಯಲ್ಲಿ ಕನಿಷ್ಠ ಶೇ.60 ರಷ್ಟು ಅಂಕಗಳು ಮತ್ತು ಪ.ಜಾತಿ/ ಪ.ವರ್ಗ/ಪ್ರವರ್ಗ-1 ಮತ್ತು ವಿಕಲಚೇತನರು ಕನಿಷ್ಠ ಶೇ.55 ರಷ್ಟು ಅಂಕಗಳೊಂದಿಗೆ ಅರ್ಹತೆ ಪಡೆದಿರುವುದು ಕಡ್ಡಾಯ. ಒಂದು ವೇಳೆ ನಿಗದಿತ ಅಂಕಗಳನ್ನು ಗಳಿಸದ ಅಭ್ಯರ್ಥಿಗಳ ಅಂಕಗಳನ್ನು ದತ್ತಾಂಶದಲ್ಲಿ ನಮೂದಿಸುವುದು. ಕಡಿಮೆ ಶೇ. ಅಂಕ ಪಡೆದ ಅಭ್ಯರ್ಥಿಗಳು Reject ಆಗುವರು. |
| 10 | ಬಿ.ಎ./ಬಿ.ಎಸ್.ಸಿ ಪದವಿಯಲ್ಲಿ ಶಿಕ್ಷಕ ಹುದ್ದೆಗೆ ನಿಗದಿಪಡಿಸಿದ ಐಚ್ಛಿಕ ವಿಷಯಯನ್ನು ಪದವಿಯ ಮೂರೂ ವರ್ಷಗಳು ಅಧ್ಯಯನ ಮಾಡದಿದ್ದಲ್ಲಿ, | ನಿಯಮಾನುಸಾರ Reject ಆಗುವರು. |
| 11 | ಅಧಿಸೂಚನೆಯಲ್ಲಿ ತಿದ್ದುಪಡಿಗೆ ಅವಕಾಶವಿಲ್ಲದ ವಿಷಯಗಳ ಕುರಿತಾಗಿ **ಉದಾ:** ಪ್ರಮಾಣ ಪತ್ರ ಸಂಖ್ಯೆ, ಎಸ್.ಎಸ್.ಎಲ್.ಸಿ, ಪಿಯುಸಿ, ಪದವಿ, ಡಿ.ಇಡಿ/ಬಿ.ಇಡಿ ಟಿ.ಇ.ಟಿ/ಸಿ.ಟಿ.ಇ.ಟಿ ಇತ್ಯಾದಿ ಗಳಿಗೆ ದಾಖಲಾತಿ ವರ್ಷ, ಉತ್ತೀರ್ಣವಾದ ವರ್ಷ, ಪ್ರಮಾಣ ಪತ್ರದ ಸಂಖ್ಯೆ, ಅಧ್ಯಯನ ಮಾಡಿದ ಬೋರ್ಡ್, ವಿಶ್ವವಿದ್ಯಾಲಯ ಹೆಸರು ಇತ್ಯಾದಿಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಮನವಿಗಳನ್ನು ಸಲ್ಲಿಸಿದಲ್ಲಿ., | ಪ್ರಮಾಣ ಪತ್ರಗಳನ್ನು ಪರಿಶೀಲಿಸಿ, ಅದರಂತೆ ದೃಢೀಕರಿಸುವುದು. |
| 12 | ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡದೇ ಪ್ರಸ್ತುತ ಹೊಸದಾಗಿ ಮಾಹಿತಿಗಳನ್ನು ಭರ್ತಿ ಮಾಡಲು ಸಲ್ಲಿಸಿದಲ್ಲಿ, | ನಿಯಮಾನುಸಾರ ಅವಕಾಶವಿಲ್ಲ |
| 13 | TCH ಹೊಂದಿರುವ ಅಭ್ಯರ್ಥಿಗಳು, ಅರ್ಜಿಯಲ್ಲಿ ಡಿ.ಇಡಿ | ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ನೇಮಕಾತಿ |

| | | |
|---|---|---|
| | ಎಂದು ನಮೂದಿಸಿರುತ್ತಾರೆ, TCH ಅನ್ನು ಡಿ.ಇಡಿ/ಡಿ.ಎಲ್.ಇಡಿ ಎಂದು ಪರಿಗಣಿಸಿ ಎಂದು ಮನವಿ ಸಲ್ಲಿಸಿದಲ್ಲಿ, | ಅಧಿಸೂಚನೆಯಲ್ಲಿ TCH ವಿದ್ಯಾರ್ಹತೆ ಹೊಂದಿರುವವರೆಗೆ ಅವಕಾಶವಿರುವುದಿಲ್ಲ. |
| 14 | ವಯೋಮಿತಿ ಪರಿಗಣಿಸುವ ವಿಧಾನ, | ವಯೋಮಿತಿಯನ್ನು ಅಭ್ಯರ್ಥಿಯ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕದೊಳಗೆ |
| 15 | ಅಭ್ಯರ್ಥಿಯು 2ಎ/2ಬಿ/3ಎ/3ಬಿ/ಪ.ಜಾ/ಪ.ವರ್ಗ/ಪ್ರವರ್ಗ–1/ ಅಂಗವಿಲ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಮೀಸಲಾತಿ ಪ್ರಮಾಣ ಪತ್ರ ಹೊಂದಿದ್ದರೂ ಸಹ ಆನ್‌ಲೈನ್ ಅರ್ಜಿಯಲ್ಲಿ ಕ್ಲೇಮು ಮಾಡಿರುವುದಿಲ್ಲ. ಅಂತಹ ಸಂದರ್ಭದಲ್ಲಿ ವಯೋಮತಿ ನಿರ್ಧಾರ ಮಾಡಲು ಮೀಸಲಾತಿ ಪ್ರಮಾಣ ಪತ್ರ ಸಲ್ಲಿಸಿದಲ್ಲಿ | ನಿಯಮಾನುಸಾರ ಸಾಮಾನ್ಯ ಅಭ್ಯರ್ಥಿಗೆ ನಿಗದಿಪಡಿಸಿದ ವಯೋಮಿತಿ ಪರಿಗಣಿಸುವುದು. |
| 16 | ಪದವಿ/ಬಿ.ಇಡಿ ಇತ್ಯಾದಿ ಶೈಕ್ಷಣಿಕ ವಿದ್ಯಾರ್ಹತೆಯ ಪ್ರಮಾಣ ಪತ್ರಗಳಲ್ಲಿ ಅಂಕ ಮತ್ತು ಗ್ರೇಡ್ ಪಾಯಿಂಟ್ ಎರಡನ್ನೂ ನಮೂದಿಸಿರುತ್ತಾರೆ. ಗ್ರೇಡ್ ಅಂಕ ಪರಗಣಿಸಿ ಎಂದು ಮನವಿ ಸಲ್ಲಿಸಿದಲ್ಲಿ, | ನೇಮಕಾತಿ ಅಧಿಸೂಚನೆಯ ಪ್ರಕಾರ ಅಂಕಗಳನ್ನು ಪರಿಗಣಿಸುವುದು. |
| 17 | ಪದವಿ/ಬಿ.ಇಡಿ ಇತ್ಯಾದಿ ಶೈಕ್ಷಣಿಕ ವಿದ್ಯಾರ್ಹತೆಯ ಪ್ರಮಾಣ ಪತ್ರಗಳಲ್ಲಿ ಕೇವಲ ಗ್ರೇಡ್ ಪಾಯಿಂಟ್ ಮಾತ್ರ ಪರಿಗಣಿಸಿದಲ್ಲಿ, | ನೇಮಕಾತಿ ಅಧಿಸೂಚನೆಯಂತೆ ಗ್ರೇಡ್ ಪಾಯಿಂಟ್ ಅನ್ನು ಅಂಕಗಳಿಗೆ ಪರಿಗಣಿಸಿರುವ ಬಗ್ಗೆ ವಿಶ್ವವಿದ್ಯಾಲಯದಿಂದ ಪಡೆದ ದೃಢೀಕರಣ ಸಲ್ಲಿಸುವುದು. |
| 18 | ಕೆಲವು ವಿಶ್ವವಿದ್ಯಾಲಯಗಳಿಂದ ಪಡೆಯಲಾದ ಪದವಿ/ಬಿ.ಇಡಿ ವೃತ್ತಿ ಪದವಿ ಇತ್ಯಾದಿ ಶೈಕ್ಷಣಿಕ ವಿದ್ಯಾರ್ಹತೆಯ ಪ್ರಮಾಣ ಪತ್ರಗಳಲ್ಲಿ ಕೆಲವು ವಿಷಯಗಳನ್ನು ಒಟ್ಟಾರೆ ಅಂಕಗಳಿಗೆ ಅಥವಾ ಶೇಕಡವಾರು ಅಂಕಗಳಿಗೆ ಪರಿಗಣಿಸಿರುತ್ತಾರೆ ಅಥವಾ ಪರಿಗಣಿಸಿರುವುದಿಲ್ಲ.<br>**ಉದಾ:–** X ಎಂಬ ಅಭ್ಯರ್ಥಿಯು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಿಂದ ಪದವಿ ಪಡೆದಿದ್ದು, ಪದವಿಯ ಅಂಕಗಳನ್ನು ನೇಮಕಾತಿಯ ಮೆರಿಟ್‌ಗೆ ಪರಿಗಣಿಸಲು ಲೆಕ್ಕ ಹಾಕುವಾಗ **ಪದವಿಯ ಅಂಕಪಟ್ಟಿಯಲ್ಲಿನ ವಿಶೇಷ ವಿಷಯಗಳಾದ** Indian Constitution, Human Rights & Enivronmental Studies (ICHRES) **ಮತ್ತು** Fundamentals of Computer Applications (FCA) **ವಿಷಯಗಳ ಅಂಕಗಳನ್ನು ಒಳಗೊಂಡಂತೆ** ಎಲ್ಲಾ ವಿಷಯಗಳ ಅಂಕಗಳನ್ನು ಪರಿಗಣಿಸಬಾರದು ಅಥವಾ ಪರಿಗಣಿಸುವಂತೆ ಮನವಿ ಸಲ್ಲಿಸಿದಲ್ಲಿ, | ಈ ಬಗ್ಗೆ ಅಂಕಪಟ್ಟಿಯ footnote ನಲ್ಲಿ ನಮೂದಿಸಿದಂತೆ ಪರಿಗಣಿಸಿ, ಪರಿಶೀಲಿಸುವುದು. |

ಉಳಿದಂತೆ ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ಭರ್ತಿಮಾಡಿದ ಮಾಹಿತಿ ಹಾಗೂ ಇನ್ನಿತರ ದಾಖಲೆಗಳ ಸಂಬಂಧ ನಿಯಮಾನುಸಾರ ಪರಿಗಣಿಸಬಹುದಾದ ಆಕ್ಷೇಪಣೆಗಳನ್ನು ಸ್ವೀಕರಿಸಿ, ಸೂಕ್ತ ಕ್ರಮಕೈಗೊಳ್ಳುವುದು.

**ವಿಶೇಷ ಸೂಚನೆ :**

1. ಪ್ರಕಟಿಸಲಾಗಿರುವ 1:2 ಅನುಪಾತದ ತಾತ್ಕಾಲಿಕ ಪರಶೀಲನಾ ಪಟ್ಟಿಯಲ್ಲಿ ಹೆಸರು ಇಲ್ಲದೇ ಇರುವ ಬಗ್ಗೆ ಅಭ್ಯರ್ಥಿಗಳು ಆಕ್ಷೇಪಣೆಗಳನ್ನು ಸಲ್ಲಿಸುವ ಸಾಧ್ಯತೆ ಇದೆ. ಅಂತಹ ಅಭ್ಯರ್ಥಿಗಳು ಪಡೆದಿರುವ Eligability Weightage ನ್ನು ನಿಮಗೆ ನೀಡಲಾಗಿರುವ Cut-off ನೊಂದಿಗೆ ಹೋಲಿಸಿ, ರೋಸ್ಟರ್ ನಿಯಮವನ್ನು ಅಳವಡಿಸಿ ಸೂಕ್ತ ಸಮಜಾಯಿಷಿ ನೀಡುವುದು. ಒಂದು ವೇಳೆ ಅಭ್ಯರ್ಥಿಯ ಆಕ್ಷೇಪಣೆ ಸಮರ್ಪಕವಾಗಿದ್ದಲ್ಲಿ ಕೇಂದ್ರೀಕೃತ ದಾಖಲಾತಿ ಘಟಕಕ್ಕೆ ತಿದ್ದುಪಡಿಗಾಗಿ ಕಳುಹಿಸುವುದು.
2. ಎರಡು ಹುದ್ದೆಗಳಿಗೆ ಅರ್ಹತೆ ಹೊಂದಿರುವ ಕೆಲವು ಅಭ್ಯರ್ಥಿಗಳು ಅರ್ಜಿಯಲ್ಲಿ ಎರಡು ಹುದ್ದೆಗಳಿಗೆ ಆಧ್ಯತೆ ನೀಡಿದ್ದು, ಎರಡರಲ್ಲಿಯೂ ಅರ್ಹತೆ ಪಡೆದಿರುತ್ತಾರೆ. ಅಂತಹ ಸಂದರ್ಭದಲ್ಲಿ ಮೊದಲ ಆಧ್ಯತೆಯ ಹುದ್ದೆಗೆ 1:2 ಪಟ್ಟಿಯಲ್ಲಿ ಅಭ್ಯರ್ಥಿಯನ್ನು ಮೂಲದಾಖಲೆಗಳ ಪರಿಶೀಲನೆಗೆ ಪರಿಗಣಿಸಲಾಗಿರುತ್ತದೆ. ಅಂತಹ ಅಭ್ಯರ್ಥಿಗಳು ಎರಡೂ ಹುದ್ದೆಗಳಿಗೆ Cut-off ಒಳಗೆ ಮೆರಿಟ್ ಅನ್ನು ಹೊಂದಿದ್ದಲ್ಲಿ ಮೊದಲು ಒಂದನೇ ಆಧ್ಯತೆಯ ಹುದ್ದೆಗೆ ಪರಿಗಣಿಸಲಾಗುವುದು, ಒಂದು ವೇಳೆ ಒಂದನೇ ಆಧ್ಯತೆಯ ಹುದ್ದೆಗೆ ಮೆರಿಟ್ Cut-off ಮೆರಿಟ್‌ಗಿಂತ ಕಡಿಮೆಯಾಗಿ ಪರಿಗಣಿಸಲ್ಪಡದಿದ್ದರೆ, ಅಂತಹ ಅಭ್ಯರ್ಥಿಯನ್ನು ಎರಡನೇ ಆಧ್ಯತೆಯ ಹುದ್ದೆಗೆ ಪರಿಗಣಿಸಲಾಗುವುದು. ಈ ಬಗ್ಗೆ ಅಭ್ಯರ್ಥಿಗಳು ಆಕ್ಷೇಪಣೆ ಸಲ್ಲಿಸಿದಲ್ಲಿ ಈ ಮೇಲ್ಕಂಡಂತೆ ತಿಳಿಸುವುದು.
3. ಎರಡು ಹುದ್ದೆಗಳಿಗೆ ಅರ್ಹತೆ ಹೊಂದಿರುವ ಕೆಲವು ಅಭ್ಯರ್ಥಿಗಳು ಅರ್ಜಿಯಲ್ಲಿ ಎರಡು ಹುದ್ದೆಗಳಿಗೆ ಆಧ್ಯತೆ ನೀಡಿದ್ದು, ಎರಡರಲ್ಲಿಯೂ ಅರ್ಹತೆ ಪಡೆದಿರುತ್ತಾರೆ.

1. ಉದಾ:-ಇಂಗ್ಲೀಷ್ ಮತ್ತು ಸಮಾಜ ವಿಜ್ಞಾನ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ಇಂಗ್ಲೀಷ್ ಹುದ್ದೆಗೆ ಸಂಬಂಧಿಸಿದಂತೆ 1:2 ಪಟ್ಟಿಯಲ್ಲಿ ಪರಿಗಣಿಸಲ್ಪಟ್ಟಿದ್ದು, ಸಮಾಜ ವಿಜ್ಞಾನ ಪಟ್ಟಿಯಲ್ಲಿ ಪರಿಗಣಿಸಲ್ಪಟ್ಟಿರಬಹುದು ಅಥವಾ ಪರಿಗಣಿಸಲ್ಲಪಡದೇ ಇರಬಹುದು. ಆದರೆ ಎರಡೂ ಹುದ್ದೆಗಳಿಗೆ ಸಂಬಂಧಿಸಿದಂತೆ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿಯಂತೆ ಅರ್ಹನಾಗಿದ್ದಾನೆಯೇ ಎಂದು ಹುದ್ದೆಗೆ ನಿಗದಿಪಡಿಸಿದ ಪದವಿಯ ಐಚ್ಚಿಕ ವಿಷಯ ಮತ್ತು ಶಿಕ್ಷಣ ಕೋರ್ಸಿನಲ್ಲಿ ಬೋಧನಾ ವಿಷಯವನ್ನು ಅಧ್ಯಯನ ಮಾಡಿದ್ದಾರೆಯೇ ಎಂದು ಪರಿಶೀಲಿಸುವುದು.
2. ಕೆಲವು ಅಭ್ಯರ್ಥಿಗಳು ಬಿ.ಇಡಿ & ಡಿ.ಎಲ್.ಇಡಿ ಎರಡರಲ್ಲೂ ಅಂಕಗಳನ್ನು ನಮೂದಿಸಿದ್ದು, ನಿಯಮಾನುಸಾರ ಹೆಚ್ಚಿನ ಶೇಕಡವಾರು ಅಂಕಗಳನ್ನು ಪರಿಗಣಿಸಲಾಗಿರುತ್ತದೆ. ಆದರೆ ಅಭ್ಯರ್ಥಿಯು ಅರ್ಜಿ ಸಲ್ಲಿಸಿರುವ ಹುದ್ದೆಗೆ ಸಂಬಂಧಿಸಿದ ಬೋಧನಾ ವಿಧಾನದ ವಿಷಯವನ್ನು ಪರಿಗಣಿಸಿರುವ ಬಿ.ಇಡಿ/ಡಿ.ಎಲ್.ಇಡಿ ಅಭ್ಯಾಸ ಮಾಡಿರುವರೇ? ಎಂಬುದನ್ನು ಪರಿಶೀಲಿಸುವುದು.

**ಉದಾ:-** ಅಭ್ಯರ್ಥಿಯು ಇಂಗ್ಲೀಷ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ಡಿ.ಎಲ್.ಇಡಿ ಅಂಕಗಳನ್ನು ಪರಿಗಣಿಸಲಾಗಿದ್ದರೆ, ಆ ಅಭ್ಯರ್ಥಿಯು ಡಿ.ಎಲ್.ಇಡಿ ಯಲ್ಲಿ ಇಂಗ್ಲೀಷನ್ನು ಬೋಧನಾ

ವಿಧಾನವನ್ನಾಗಿ ಬೋಧನಾ ವಿಧಾನವನ್ನಾಗಿ ಅಭ್ಯಾಸ ಮಾಡಿರಬೇಕು. ಇಲ್ಲದಿದ್ದಲ್ಲಿ ಆ ಅಂಕಗಳನ್ನು ಪರಿಗಣಿಸುವಂತಿಲ್ಲ. ಬದಲಾಗಿ ಬಿ.ಇಡಿ ಅಂಕಗಳನ್ನು ಪರಿಗಣಿಸುವುದು. ಇದನ್ನು ಕಡ್ಡಾಯವಾಗಿ ನಿಮ್ಮ ಹಂತದಲ್ಲಿ ಪರಿಶೀಲಿಸಿ ವ್ಯತ್ಯಾಸವಿದ್ದಲ್ಲಿ ಕೇಂದ್ರೀಕೃತ ದಾಖಲಾತಿ ಘಟಕದಲ್ಲಿ ಮಾರ್ಪಾಡು ಮಾಡಿಸುವುದು.

3. ಮೂಲದಾಖಲೆಗಳ ಪರಿಶೀಲನೆಗೆ (ನಿಗದಿತ ದಿನಾಂಕಕ್ಕೆ ಮೊದಲು ಅಂದರೆ ಕೊನೆಯ ಎರಡು ದಿನ ಬಾಕಿ ಇರುವವರೆವಿಗೂ) ಹಾಜರಾಗದ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿ, ಅಂತವರ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸವನ್ನು ಕೇಂದ್ರೀಕೃತ ದಾಖಲಾತಿ ಘಟಕವನ್ನು

ಪಡೆದು, ಅಭ್ಯರ್ಥಿಗಳಿಗೆ ಮೂಲದಾಖಲೆಗಳ ಪರಿಶೀಲನೆಗೆ ಹಾಜರಾಗದಿದ್ದಲ್ಲಿ ನೇಮಕಾತಿಯ ಮುಂದಿನ ಪ್ರಕ್ರಿಯೆಗಳಿಂದ ಹೊರಗುಳಿಯುವರು ಮತ್ತು Reject ಆಗುವರು ಎಂಬುದಾಗಿ ಪತ್ರಮುಖೇನೆ ಮತ್ತು ದೂರವಾಣಿ ಮುಖೇನ ಮಾಹಿತಿ ನೀಡುವುದು. ವಿವರಗಳನ್ನು ಅನುಬಂಧಗಳಲ್ಲಿ ನೀಡಿದೆ.

ಸಹಿ/-

ವಿಶೇಷಾಧಿಕಾರಿ

## ಅನುಬಂಧ–1

**ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿ ಸಂಬಂಧ ಪ್ರಕಟಿಸಲಾದ 1:2 ಅನುಪಾತದ ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳು ಮೂಲದಾಖಲೆಗಳ ಪರಿಶೀಲನಾ ಸಮಯದಲ್ಲಿ ಉಪನಿರ್ದೇಶಕರು (ಆಡಳಿತ) ಹಾಗೂ ನೇಮಕಾತಿ ಪ್ರಾಧಿಕಾರ ರವರು ಮತ್ತು ಮೂಲದಾಖಲೆಗಳ ಪರಿಶೀಲನಾ ಕಾರ್ಯಕ್ಕೆ ನಿಯೋಜನೆಗೊಳ್ಳುವ ಅಧಿಕಾರಿ ಮತ್ತು ಸಿಬ್ಬಂದಿಯವರು ಪರಿಶೀಲಿಸಬೇಕಾದ ಪ್ರಮಾಣ ಪತ್ರ/ದಾಖಲೆಗಳು**

1. ಆನ್‌ಲೈನ್ ಅರ್ಜಿಯ ಮುದ್ರಿತ ಪ್ರತಿ
2. ಎಸ್.ಎಸ್.ಎಲ್.ಸಿ ಅಂಕಪಟ್ಟಿ.
3. ಪಿ.ಯು.ಸಿ ಅಂಕಪಟ್ಟಿ
4. ಪದವಿಯ ಮೂರು ವರ್ಷದ (06 ಸೆಮಿಸ್ಟರ್‌ಗಳ) ಅಂಕಪಟ್ಟಿಗಳು
5. ಪದವಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ (Degree Convocation Certificate)
6. ಬಿ.ಎ.ಇಡಿ ಹಾಗೂ ಬಿ.ಎಸ್ಸಿ.ಇಡಿ ಪದವಿಯ ನಾಲ್ಕು ವರ್ಷದ ಅಂಕಪಟ್ಟಿಗಳು
7. ಬಿ.ಎ.ಇಡಿ ಹಾಗೂ ಬಿ.ಎಸ್ಸಿ.ಇಡಿ ಪದವಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ
8. ಬಿ.ಇಡಿ ಪದವಿಯ ಅಂಕಪಟ್ಟಿ
9. ಬಿ.ಇಡಿ ಪದವಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ (B.Ed Convocation Certificate)
10. ಡಿ.ಇಡಿ/ಡಿ.ಎಲ್.ಇಡಿ ಕೋರ್ಸಿನ ಎರಡು ವರ್ಷಗಳ ಅಂಕಪಟ್ಟಿ.
11. ಶಿಕ್ಷಕರ ಅರ್ಹತಾ ಪರೀಕ್ಷೆ (ಟಿ.ಇ.ಟಿ) ಅರ್ಹತಾ ಪ್ರಮಾಣ ಪತ್ರ
12. ಅಭ್ಯರ್ಥಿಯ ಆಧಾರ್ ಕಾರ್ಡ್
13. ಮೀಸಲಾತಿ ಕೋರಿರುವ ಪ್ರವರ್ಗದ ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಮತ್ತು ಚಾಲ್ತಿಯಲ್ಲಿರುವ ಆದಾಯ ಪ್ರಮಾಣ ಪತ್ರ (RD ನಂಬರ್ ಹೊಂದಿರಬೇಕು) (SC/ST, CAT-1, 2A, 2B, 3A ಮತ್ತು 3B)
14. ಹೈ.ಕ ಮೀಸಲಾತಿಗಾಗಿ, ಸಕ್ಷಮ ಪ್ರಾಧಿಕಾರದಿಂದ ಪಡೆದ 317ಜೆ ಪ್ರಮಾಣ ಪತ್ರ. (RD ನಂಬರ್ ಹೊಂದಿರಬೇಕು)
15. ಸಾಮಾನ್ಯ ವರ್ಗದ ಗ್ರಾಮೀಣ ಅಭ್ಯರ್ಥಿಗಳಿಗೆ Non-Creamy Layer Certificate (RD ನಂಬರ್ ಹೊಂದಿರುವ) (ತಹಶೀಲ್ದಾರ್ ರವರಿಂದ ಪಡೆದಿರಬೇಕು)
16. ಮಾಜಿ ಸೈನಿಕರಿಗಾಗಿ ಕಾರ್ಯನಿರ್ವಹಿಸಿರುವ/ಅವಲಂಬಿತರ ಪ್ರಮಾಣಪತ್ರ.
17. ತೃತೀಯ ಲಿಂಗಿ ಅಭ್ಯರ್ಥಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ನೀಡಿದ ಪ್ರಮಾಣ ಪತ್ರ

# ಅನುಬಂಧ–1

**ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿ ಸಂಬಂಧ ಪ್ರಕಟಿಸಲಾದ 1:2 ಅನುಪಾತದ ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳು ಮೂಲದಾಖಲೆಗಳ ಪರಿಶೀಲನಾ ಸಮಯದಲ್ಲಿ ಉಪನಿರ್ದೇಶಕರು (ಆಡಳಿತ) ಹಾಗೂ ನೇಮಕಾತಿ ಪ್ರಾಧಿಕಾರ ರವರು ಮತ್ತು ಮೂಲದಾಖಲೆಗಳ ಪರಿಶೀಲನಾ ಕಾರ್ಯಕ್ಕೆ ನಿಯೋಜನೆಗೊಳ್ಳುವ ಅಧಿಕಾರಿ ಮತ್ತು ಸಿಬ್ಬಂದಿಯವರು ಪರಿಶೀಲಿಸಬೇಕಾದ ಪ್ರಮಾಣ ಪತ್ರ/ದಾಖಲೆಗಳು**

1. ಆನ್‌ಲೈನ್ ಅರ್ಜಿಯ ಮುದ್ರಿತ ಪ್ರತಿ
2. ಎಸ್.ಎಸ್.ಎಲ್.ಸಿ ಅಂಕಪಟ್ಟಿ.
3. ಪಿ.ಯು.ಸಿ ಅಂಕಪಟ್ಟಿ
4. ಪದವಿಯ ಮೂರು ವರ್ಷದ (06 ಸೆಮಿಸ್ಟರ್‌ಗಳ) ಅಂಕಪಟ್ಟಿಗಳು
5. ಪದವಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ (Degree Convocation Certificate)
6. ಬಿ.ಎ.ಇಡಿ ಹಾಗೂ ಬಿ.ಎಸ್ಸಿ.ಇಡಿ ಪದವಿಯ ನಾಲ್ಕು ವರ್ಷದ ಅಂಕಪಟ್ಟಿಗಳು
7. ಬಿ.ಎ.ಇಡಿ ಹಾಗೂ ಬಿ.ಎಸ್ಸಿ.ಇಡಿ ಪದವಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ
8. ಬಿ.ಇಡಿ ಪದವಿಯ ಅಂಕಪಟ್ಟಿ
9. ಬಿ.ಇಡಿ ಪದವಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ (B.Ed Convocation Certificate)
10. ಡಿ.ಇಡಿ/ಡಿ.ಎಲ್.ಇಡಿ ಕೋರ್ಸಿನ ಎರಡು ವರ್ಷಗಳ ಅಂಕಪಟ್ಟಿ.
11. ಶಿಕ್ಷಕರ ಅರ್ಹತಾ ಪರೀಕ್ಷೆ (ಟಿ.ಇ.ಟಿ) ಅರ್ಹತಾ ಪ್ರಮಾಣ ಪತ್ರ
12. ಅಭ್ಯರ್ಥಿಯ ಆಧಾರ್ ಕಾರ್ಡ್
13. ಮೀಸಲಾತಿ ಕೋರಿರುವ ಪ್ರವರ್ಗದ ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಮತ್ತು ಚಾಲ್ತಿಯಲ್ಲಿರುವ ಆದಾಯ ಪ್ರಮಾಣ ಪತ್ರ (RD ನಂಬರ್ ಹೊಂದಿರಬೇಕು) (SC/ST, CAT-1, 2A, 2B, 3A ಮತ್ತು 3B)
14. ಹೈ.ಕ ಮೀಸಲಾತಿಗಾಗಿ, ಸಕ್ಷಮ ಪ್ರಾಧಿಕಾರದಿಂದ ಪಡೆದ 317ಜೆ ಪ್ರಮಾಣ ಪತ್ರ. (RD ನಂಬರ್ ಹೊಂದಿರಬೇಕು)
15. ಸಾಮಾನ್ಯ ವರ್ಗದ ಗ್ರಾಮೀಣ ಅಭ್ಯರ್ಥಿಗಳಿಗೆ Non-Creamy Layer Certificate (RD ನಂಬರ್ ಹೊಂದಿರುವ) (ತಹಶೀಲ್ದಾರ್ ರವರಿಂದ ಪಡೆದಿರಬೇಕು)
16. ಮಾಜಿ ಸೈನಿಕರಿಗಾಗಿ ಕಾರ್ಯನಿರ್ವಹಿಸಿರುವ/ಅವಲಂಬಿತರ ಪ್ರಮಾಣಪತ್ರ.
17. ತೃತೀಯ ಲಿಂಗಿ ಅಭ್ಯರ್ಥಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ನೀಡಿದ ಪ್ರಮಾಣ ಪತ್ರ
18. ಗ್ರಾಮೀಣ ಅಭ್ಯರ್ಥಿ ವ್ಯಾಸಂಗ ಪ್ರಮಾಣ ಪತ್ರ ಹಾಗೂ ಸಿಂಧುತ್ವ ಪ್ರಮಾಣ ಪತ್ರಗಳು (ದಿನಾಂಕ:10–08–2005ರ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿರುವ ನಮೂನೆ–1 & ನಮೂನೆ–2ರಲ್ಲಿ)

19. ಅಂಗವಿಕಲ ಪ್ರಮಾಣ ಪತ್ರ
20. ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ
21. ಯೋಜನಾ ನಿರಾಶ್ರಿತರ ಅಭ್ಯರ್ಥಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ನೀಡಿದ ಪ್ರಮಾಣ ಪತ್ರ.
22. ಪ್ರಸ್ತುತ ಉದ್ಯೋಗದ ಸೇವಾವಿವರಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರದಿಂದ ಪಡೆದುಕೊಂಡಿರುವ ಅನುಮತಿ ಪತ್ರದ ಪ್ರತಿ.
23. ಅರ್ಜಿಯಲ್ಲಿ ಭರ್ತಿ ಮಾಡಿರುವಂತೆ ಅವಶ್ಯವೆಂದು ಭಾವಿಸಿದ ಇನ್ನಿತರ ದಾಖಲೆಗಳ ಪ್ರತಿಗಳು.

ಅಭ್ಯರ್ಥಿಗಳು ಈ ಮೇಲ್ಕಂಡ ಪ್ರಮಾಣ ಪತ್ರಗಳ ಮೂಲದಾಖಲೆಗಳನ್ನು ಆನ್‌ಲೈನ್ ಅರ್ಜಿಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: 23–04–2022 ರೊಳಗಾಗಿ ಪಡೆದಿರಬೇಕು.

ಅನುಬಂಧ-2

| GPTR-2022- HELP LINE NUMBER FOR VERIFICATION OF DOCUMENTS | | | | |
|---|---|---|---|---|
| **Sl.No** | **District** | **Phone Number -1** | **Phone Number-2** | **Phone Number-3** |
| | | | | |
| | | | | |
| | | | | |
| | | | | |
| | | | | |
| | | | | |

| GPTR-2022 - VERIFICATION SCHEDULE | | | | |
|---|---|---|---|---|
| **District** | **Date** | **Reg.Num** | **Subject** | **Total** |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

| | | | | |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

ಅನುಬಂಧ-3

| ಜಿ.ಪಿ.ಟಿ.ಆರ್-2022 ಗೆ ಸಂಬಂದಿಸಿದಂತೆ ಅಭ್ಯರ್ಥಿಗಳು ಆನ್ ಲೈನ್ ಅರ್ಜಿ ಸಲ್ಲಿಸುವಾಗ ನಮೂದಿಸಿರುವ ಮಾಹಿತಿಗಳಲ್ಲಿ ಅವಶ್ಯ ತಿದ್ದುಪಡಿಗಾಗಿ ದಿನಾಂಕ:-18-08-2022 ರಿಂದ 14-08-2022ರವರೆಗೆ ಸಲ್ಲಿಸಿರುವ ಜಿಲ್ಲಾವಾರು ಮನವಿಗಳ ವಿವರ | | |
|---|---|---|
| ಕ್ರ ಸಂ | ಜಿಲ್ಲೆ ಹೆಸರು | ಮನವಿಗಳ ಸಂಖ್ಯೆ |
| 1 | ಬಾಗಲಕೋಟೆ | 50 |
| 2 | ಬೆಳಗಾವಿ | 65 |
| 3 | ಬೆಂಗಳೂರು ಉತ್ತರ | 17 |
| 4 | ಬೆಂಗಳೂರು ಗ್ರಾಮಾಂತರ | 18 |
| 5 | ಬೆಂಗಳೂರು ದಕ್ಷಿಣ | 9 |
| 6 | ವಿಜಯನಗರ | 35 |
| 7 | ವಿಜಯಪುರ | 88 |
| 8 | ಬಳ್ಳಾರಿ | 37 |
| 9 | ಶಿವಮೊಗ್ಗ | 30 |
| 10 | ಶಿರಶಿ | 32 |
| 11 | ಮಂಡ್ಯ | 37 |
| 12 | ಮಧುಗಿರಿ | 14 |
| 13 | ಮೈಸೂರು | 68 |
| 14 | ಯಾದಗಿರಿ | 67 |
| 15 | ಚಿಕ್ಕೋಡಿ | 109 |
| 16 | ಚಿಕ್ಕಬಳ್ಳಾಪುರ | 35 |
| 17 | ಚಿಕ್ಕಮಗಳೂರು | 5 |
| 18 | ಚಿತ್ರದುರ್ಗ | 17 |
| 19 | ರಾಮನಗರ | 15 |
| 20 | ರಾಯಚೂರು | 75 |
| 21 | ಉಡುಪಿ | 17 |
| 22 | ಉತ್ತರಕನ್ನಡ | 3 |
| 23 | ಹಾಸನ | 11 |
| 24 | ಹಾವೇರಿ | 14 |
| 25 | ಕಲಬುರ್ಗಿ | 61 |
| 26 | ಕೊಪ್ಪಳ | 44 |
| 27 | ಕೊಡಗು | 6 |
| 28 | ಕೋಲಾರ | 20 |
| 29 | ಗದಗ | 14 |
| 30 | ತುಮಕೂರು | 14 |
| 31 | ಚಾಮರಾಜನಗರ | 20 |
| 32 | ದಾವಣಗೆರೆ | 4 |
| 33 | ದಕ್ಷಿಣ ಕನ್ನಡ | 41 |
| 34 | ಧಾರವಾಡ | 12 |
| 35 | ಬೀದರ್ | 33 |

ಅನುಬಂಧ-4

BELAGAVI DIVISION

| Sl.No | Disticts | Total NO. Of Candidates | Date of Updation in CAC | TEAM NUMBER |
|---|---|---|---|---|
| 1 | BAGALAKOTE | 1076 | 19-10-2022 to 20-10-2022 | 1 &2 |
| 2 | BELAGAVI | 1116 | 19-10-2022 to 20-10-2022 | 3 & 4 |
| 3 | VIJAYAPURA | 1238 | 19-10-2022 to 20-10-2022 | 5 & 6 |
| 4 | DHARAWADA | 524 | 19-10-2022 to 20-10-2022 | 7 |
| 5 | GADAG | 276 | 19-10-2022 to 20-10-2022 | 8 |
| 6 | UTTARAKANNADA | 164 | 19-10-2022 to 20-10-2022 | 9 |
| 7 | HAVERI | 580 | 19-10-2022 to 20-10-2022 | 8 |
| 8 | CHIKKODI | 1940 | 19-10-2022 to 20-10-2022 | 10 & 11 |
| 9 | SIRSI | 652 | 19-10-2022 to 20-10-2022 | 9 |

KALABURGI DIVISION

| Sl.No | Disticts | Total NO. Of Candidates | Date of Updation in CAC | TEAM NUMBER |
|---|---|---|---|---|
| 1 | BIDAR | 710 | 21-10-2022 to 22-10-2022 | 1 &2 |
| 2 | KALABURGI | 1379 | 21-10-2022 to 22-10-2022 | 3 & 4 |
| 3 | KOPPAL | 779 | 21-10-2022 to 22-10-2022 | 5 & 6 |
| 4 | RAICHURU | 1324 | 21-10-2022 to 22-10-2022 | 7 |
| 5 | YADAGIRI | 1069 | 21-10-2022 to 22-10-2022 | 8 |
| 6 | VIJAYANAGARA | 790 | 21-10-2022 to 22-10-2022 | 9 |
| 7 | BALLARY | 678 | 21-10-2022 to 22-10-2022 | 8 |

MYSORE DIVISION

| Sl.No | Disticts | Total NO. Of Candidates | Date of Updation in CAC | TEAM NUMBER |
|---|---|---|---|---|
| 1 | CHAMARAJANAGARA | 361 | 17-10-2022 to 18-10-2022 | 1 &2 |
| 2 | CHICKKAMAGALURU | 163 | 17-10-2022 to 18-10-2022 | 3 & 4 |
| 3 | DAKSHINA KANNADA | 925 | 17-10-2022 to 18-10-2022 | 5 & 6 |
| 4 | HASSAN | 348 | 17-10-2022 to 18-10-2022 | 7 |
| 5 | KODAGU | 153 | 17-10-2022 to 18-10-2022 | 8 |
| 6 | MANDYA | 778 | 17-10-2022 to 18-10-2022 | 9 |
| 7 | MYSORE | 1057 | 17-10-2022 to 18-10-2022 | 8 |
| 8 | UDUPI | 417 | 17-10-2022 to 18-10-2022 | |